ದಿ.19.09.2022 OS.No.76/2011 DW-1

ದಿ:19.09.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಡಿ ಎನ್ ಎನ್ ವಕೀಲರಿಂದಃ

ದಾವಾ ಷೆಡ್ಯೂಲ್ ಆಸ್ತಿ *1956* ಕ್ಕೂ ಮುಂಚೆ ಯಾರ ಹೆಸರಿನಲ್ಲಿ ಇತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಆಗ ದಾವಾ ಷೆಡ್ಯೂಲ್ ಆಸ್ತಿ ನಿಮ್ಮ ತಂದೆ ಎಂ. ಚನ್ನೇಗೌಡರ ಹೆಸರಿನಲ್ಲಿತ್ತು ಎಂದರೆ ಗೊತ್ತಿಲ್ಲ. ಮುದುಗೆರೆ ಗ್ರಾಮದ ಸರ್ವೆ ನಂಬರ್ *207* ರಲ್ಲಿ *1* ಎಕರೆ *4* ಗುಂಟೆ ಹೊರತು ಪಡಿಸಿ ವಾದಿಗಳು ಮತ್ತು ಪ್ರತಿವಾದಿಗಳಿಗೆ ಬೇರೆ ಆಸ್ತಿ ಇಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಮ್ಮ ತಂದೆ ಹೆಸರಿನಲ್ಲಿ *30* ಗುಂಟೆ ಜಮೀನು ಇದ್ದು ಅದು ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ. ಮುದುಗೆರೆ ಗ್ರಾಮದ ಸರ್ವೆ ನಂಬರ್ *207* ರಲ್ಲಿ ಎಷ್ಟು ಜಮೀನು ಇತ್ತು ಎಂದು ತಿಳಿದುಕೊಳ್ಳಲು ತೊಂದರೆ ಇತ್ತೇ ಎಂದರೆ ಸಾಕ್ಷಿ ನಮ್ಮ ತಂದೆಯೇ ಹೆಸರಿನಲ್ಲಿ ಎಷ್ಟು ಜಮೀನು ಇತ್ತೋ ಅಷ್ಟು ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ್ ಒಟ್ಟು ಕುಟುಂಬದ ಆಸ್ತಿ *14* ಗುಂಟೆ ಸರ್ಕಾರಿ ಆಸ್ಪತ್ರೆ ಹೆಸರಿನಲ್ಲಿ ಆರ್ ಟಿ ಸಿ ಇದೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರ ನನಗೆ ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿ ಜಯಮ್ಮನವರ ಹೆಸರಿನಲ್ಲಿ ಖಾತೆ ಇದ್ದು ಅದನ್ನು ಪ್ರಶ್ನಿಸಿ ಎ ಸಿ ಯವರ ನ್ಯಾಯಾಲಯದಲ್ಲಿ ವಾದಿಗಳು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನಾನು ಸಹ ಒಬ್ಬ ಪಕ್ಷಗಾರ ಎಂದರೆ ಸರಿ. ಸದರಿ ಪ್ರಕರಣದಲ್ಲಿ ವಕೀಲರನ್ನು ನೇಮಿಸಿಕೊಂಡಿರಲಿಲ್ಲ. ಸದರಿ ಮೇಲ್ಮನವಿ ಆದೇಶ ಏನು ಆಗಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. ಸದರಿ ವಿಚಾರ ವನ್ನು ತಿಳಿದುಕೊಳ್ಳಲು ಏನಾದರೂ ತೊಂದರೇ ಇತ್ತೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿಯ ಆದೇಶದಲ್ಲಿ ಸಿವಿಲ್

ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಆದೇಶ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು. (ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ